**OS** 65/17

ಪಿಡಬ್ಲ್ಯೂ1 ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ದಿಃ 27-03-2025

ಮುಂದುವರಿದ ಪಾಟೀ ಸವಾಲು : 1 ನೇ ಪ್ರತಿವಾದಿ ಪರಃ ಶ್ರೀ ಐ ಆರ್ ಬಿ ವಕೀಲರಿಂದಃ

ನನ್ನ ತಾಯಿ ದಿಃ 28-12-2016 ಕ್ಕೆ ಮೃತಪಟ್ಟಿರುತ್ತಾರೆ. ನನ್ನ ತಂದೆಗೆ 90 ವರ್ಷ ಪ್ರಾಯವಾಗಿದ್ದು ನ್ಯಾಯಾಲಯಕ್ಕೆ ಬರಲಾಗಿರುವುದಿಲ್ಲ. ದಾವಾ ಸಿ ಶೆಡ್ಯೂಲ್ ಆಸ್ತಿಯ ಬಗ್ಗೆ 1 ನೇ ಪ್ರತಿವಾದಿಗೆ ಕ್ರಯ ಚೀಟಿ ಮಾಡಿಕೊಟ್ಟಿರುತ್ತೇವೆ. ದಾವಾ ಸಿ ಶೆಡ್ಯೂಲ್ ಆಸ್ತಿಗೆ ತಾಗಿ ದಾವಾ ಬಿ ಶೆಡ್ಯೂಲ್ ಆಸ್ತಿ ಇದೆ ಎಂದರೆ ಸರಿಯಲ್ಲ. ದಾವಾ ಬಿ ಶೆಡ್ಯೂಲ್ ಆಸ್ತಿಯಿಂದ ಸಿ ಶೆಡ್ಯೂಲ್ ಆಸ್ತಿ ದೂರ ಇದೆ ಎಂದು ತೋರಿಸಲು ನಮ್ಮ ಬಳಿ ಯಾವುದೇ ನಕ್ಷೆ ಇಲ್ಲ. ದಾವಾ ಬಿ ಶೆಡ್ಯೂಲ್ ಆಸ್ತಿ ಸಿ ಶೆಡ್ಯೂಲ್ ಆಸ್ತಿಯ ಕುಮ್ಕಿ ಎಂದು ನ್ಯಾಯಾಲಯದಲ್ಲಿ ತೀರ್ಮಾನವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ಯಶೋದರವರ ವಂಶವೃಕ್ಷವನ್ನು ಹಾಜರುಪಡಿಸಿರುವುದಿಲ್ಲ. ನನ್ನ ತಾಯಿ ಮೃತಪಟ್ಟ ನಂತರ ಪಹಣಿ ಪತ್ರಿಕೆ ನನ್ನ ಹೆಸರಿಗೆ ಆಗಿದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ತಾಯಿಯಿಂದ ನನಗೆ ಆಸ್ತಿ ಬಂದ ಬಗ್ಗೆ ದಾಖಲೆ ಇದೆ. ಸದರಿ ದಾಖಲೆಯನ್ನು ನನ್ನ ತಾಯಿ ಜೀವಂತವಾಗಿರುವಾಗ ಮಾಡಿಕೊಟ್ಟಿರುತ್ತಾರೆ. ಸದರಿ ದಾಖಲೆಯನ್ನು ನಾನು ನನ್ನ ವಕೀಲರಿಗೆ ನೀಡಿರುತ್ತೇನೆ. ಈ ದಾವೆಯನ್ನು ತಾಯಿಯಿಂದ ಬಂದ ಆಸ್ತಿಗೆ ಹಾಕಿರುತ್ತೇನೆ. ತಾಯಿ ನನಗೆ ಬರೆದುಕೊಟ್ಟ ದಾಖಲೆಯ ಆಧಾರದಲ್ಲಿ ಈ ಕೇಸನ್ನು ಹಾಕಿರುತ್ತೇನೆ. ಆ ದಾಖಲೆ ನೋಡಿದರೆ ನನ್ನ ತಾಯಿ ಎಷ್ಟು ಆಸ್ತಿ ನನಗೆ ಬರೆದುಕೊಟ್ಟಿದ್ದರು ಎಂದು ಗೊತ್ತಾಗುತ್ತದೆ. ಸದರಿ ದಾಖಲೆಗೆ ನಕ್ಷೆ ಇದೆ. ಸದರಿ ದಾಖಲೆಯನ್ನು ನೊಂದಾಣಿ ಕಛೇರಿಯಲ್ಲಿ ಮಾಡಿಕೊಟ್ಟಿರುತ್ತಾರೆ. ಸದರಿ ಆಸ್ತಿಗೆ

ಸಂಬಂಧಪಟ್ಟ ದಾಖಲೆ ಮನೆಯಲ್ಲಿ ಇದೆ. ಈ ಆಸ್ತಿ ಜಂಟಿ ಸ್ವಾಧೀನದಲ್ಲಿ ಇದೆ. ಆ ಬಗ್ಗೆ ಸಂತತಿ ನಕ್ಷೆ ಇದೆ. ಸದರಿ ದಾಖಲೆಯನ್ನು ನನ್ನ ವಕೀಲರಿಗೆ ಕೊಟ್ಟಿರುತ್ತೇನೆ. ಎ ಶೆಡ್ಯೂಲ್ ಆಸ್ತಿ ಮತ್ತು ಬಿ ಶೆಡ್ಯೂಲ್ ಆಸ್ತಿ ನನ್ನ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ಎ ಶೆಡ್ಯೂಲ್ ಆಸ್ತಿಯ ಬಗ್ಗೆ ನಕ್ಷೆ ಇದೆ. ಅದು ಶಾನಭೋಗರು ಮಾಡಿದ ನಕ್ಷೆ. ಸದರಿ ನಕ್ಷೆಯನ್ನು ನೋಡಿದರೆ ಎಲ್ಲಾರ ಜಾಗದ ಹಕ್ಕು ಗೊತ್ತಾಗುತ್ತದೆ. ಈ ದಾವೆಯನ್ನು ದಾಖಲಿಸಲು ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಎ ಅನುಸೂಚಿ ಆಸ್ತಿಗೆ ಪೂರ್ವ ದಿಕ್ಕಿಗೆ ತೋಡು ಇದೆ. ಅದು 5 ಅಡಿ ಆಳ ಇದೆ. ನನಗೆ ಬಿ ಶೆಡ್ಯೂಲ್ ಆಸ್ತಿಯಲ್ಲಿ ಯಾವುದೇ ಹಕ್ಕು ಸ್ವಾಧೀನತೆ ಇಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ದಂಡನೆ ತೀರ್ವೆ ಕಟ್ಟಿದ ಬಗ್ಗೆ ರಶೀದಿಗಳು ಇವೆ. ಸದರಿ ದಾಖಲೆಗಳನ್ನು ಹಾಜರುಪಡಿಸಬಹುದು. ಸದರಿ ದಾಖಲೆಗಳನ್ನು ನೋಡಿದರೆ ಯಾವ ಸರ್ವೇ ನಂಬರ್ ಗೆ ತೀರ್ವೆ ಕಟ್ಟಲಾಗಿದೆ ಎಂದು ಗೊತ್ತಾಗುತ್ತದೆ. ಪ್ರತಿವಾದಿಯವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಬಿ ಶೆಡ್ಯೂಲ್ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಬಿ ಶೆಡ್ಯೂಲ್ ಆಸ್ತಿಯನ್ನು 1 ನೇ ಪ್ರತಿವಾದಿ ತಮ್ಮ ಸಿ ಶೆಡ್ಯೂಲ್ ಆಸ್ತಿಗೆ ಬೇಕಾದ ಸ್ವತ್ತುಗಳಿಗೆ ಕಟ್ಟೆಗೆಯನ್ನು ಉಪಯೋಗಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಅವರ ಜಾನುವಾರುಗಳನ್ನು ಮೇಯಿಸುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ